# Office of the Chief Electoral Officer, Karnataka

Nirvachana Nilaya, Sheshadri Road, Bangalore-560 001.

No. DPAR 40 CHUMASAM 2014 Date: 19.07.2014

## PRESS NOTE

There are three clear vacancies from the following Assembly Constituencies in Karnataka, which need to be filled up:

| SL.No | No. & Name of the Assembly Constituency |
|---|---|
| 1 | 02-Chikkodi –Sadalaga |
| 2 | 93-Bellary (ST) |
| 3 | 115-Shikaripura |

The Election Commission has decided to hold by- elections to fill these vacancies as per the following schedule:-

| | | |
|---|---|---|
| 1 | Issue of Notification | 26.07.2014 Saturday |
| 2 | Last date of making Nominations | 02.08.2014 Saturday |
| 3 | Scrutiny of Nominations | 04.08.2014 Monday |
| 4 | Last date for withdrawal of Candidatures | 06.08.2014 Wednesday |
| 5 | Date of Poll | 21.08.2014 Thursday |
| 6 | Counting of Votes | 25.08.2014 Monday |
| 7 | Date before which elections shall be completed | 30.08.2014 Saturday |

**Electoral Rolls**

The Electoral Rolls of these Assembly Constituency have been revised with reference to 01.01.2014 as the qualifying date and have been finally published on 31.01.2014.

**Electronic Voting Machines (EVMs)**

The Commission has decided to use EVMs in the by- election in all the polling stations. Adequate numbers of EVMs have been made available and all

steps have been taken to ensure that polls are conducted smoothly with the help of these machines.

**Identifications of Voters**

The Commission has decided that the voter's identification shall be mandatory in the aforementioned by-election at the time of poll. Photo Electoral Roll (PER) and Elector's Photo Identity Card (EPIC) shall be the main document of identification of a voter. However in order to ensure that no voter is deprived of his/her franchise, if his/her name figures in the Electoral Rolls, separate instructions will be issued to allow additional documents for identification of voters at the time of poll in the said by-election.

**Model Code of Conduct**

The provisions of Model Code of Conduct in respect of tours of ministers and transfer of election related officers will be applicable to the entire district. However, restrictions on new works/schemes will be applicable to the Assembly Constituencies only.

(ANIL KUMAR JHA)
Chief Electoral Officer and,
Ex-Officio Principal Secretary to Govt,
DPAR (Elections).

## ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು–560 001.

ಸಂಖ್ಯೆ: ಸಿಆಸುಇ 40 ಚುಮಾಸಂ 2014

ದಿನಾಂಕ:19.07.2014

**<u>ಪತ್ರಿಕಾ ಪ್ರಕಟಣೆ</u>**

ಕರ್ನಾಟಕದ ಈ ಕೆಳಕಂಡ ಮೂರು ವಿಧಾನ ಸಭಾ ಕ್ಷೇತ್ರಗಳು ಖಾಲಿ ಇದ್ದು, ಅವುಗಳನ್ನು ಭರ್ತಿ ಮಾಡಬೇಕಾದ ಅವಶ್ಯಕತೆ ಇರುತ್ತದೆ.

| ಕ್ರಮ ಸಂಖ್ಯೆ | ವಿಧಾನ ಸಭಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರು |
|---|---|
| 1 | 02–ಚಿಕ್ಕೋಡಿ–ಸದಲಗಾ |
| 2 | 93–ಬಳ್ಳಾರಿ (ಪರಿಶಿಷ್ಟ ಪಂಗಡ) |
| 3 | 115–ಶಿಕಾರಿಪುರ |

ಈ ಮೇಲ್ಕಂಡಂತೆ ತೆರವಾಗಿರುವ ಸ್ಥಾನಗಳನ್ನು ತುಂಬಲು ಈ ಕೆಳಕಂಡ ಕಾರ್ಯಸೂಚಿಯಂತೆ ಉಪಚುನಾವಣೆ ನಡೆಸಲು ಭಾರತ ಚುನಾವಣಾ ಆಯೋಗವು ನಿರ್ಧರಿಸುತ್ತದೆ.

| | | |
|---|---|---|
| 1 | ಅಧಿಸೂಚನೆ ಹೊರಡಿಸುವ ದಿನಾಂಕ | 26.07.2014( ಶನಿವಾರ) |
| 2 | ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 02.08.2014 (ಶನಿವಾರ) |
| 3 | ನಾಮಪತ್ರಗಳ ಪರಿಶೀಲನೆ ದಿನಾಂಕ | 04.08.2014 (ಸೋಮವಾರ) |
| 4 | ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ | 06.08.2014 (ಬುಧವಾರ) |
| 5 | ಮತದಾನದ ದಿನಾಂಕ | 21.08.2014 (ಗುರುವಾರ) |
| 6 | ಮತಗಳ ಎಣಿಕೆ ದಿನಾಂಕ | 25.08.2014 (ಸೋಮವಾರ) |
| 7 | ಚುನಾವಣೆಯನ್ನು ಮುಕ್ತಾಯಗೊಳಿಸಬೇಕಾದ ದಿನಾಂಕ | 30.08.2014 (ಶನಿವಾರ) |

**<u>ಮತದಾರರ ಪಟ್ಟಿ</u>**

ಈ ಮೇಲ್ಕಾಣಿಸಿದ ವಿಧಾನ ಸಭಾ ಕ್ಷೇತ್ರಗಳಲ್ಲಿನ ಮತದಾರರ ಅರ್ಹತಾ ದಿನಾಂಕ: 01.01.2014ರಂತೆ ಮತದಾರರ ಪಟ್ಟಿಯನ್ನು ಪರಿಷ್ಕರಿಸಲಾಗಿದ್ದು, ಅಂತಿಮ ಮತದಾರರ ಪಟ್ಟಿಯನ್ನು ದಿನಾಂಕ: 31.01.2014ರಂದು ಪ್ರಕಟಿಸಲಾಗಿರುತ್ತದೆ.

**<u>ವಿದ್ಯುನ್ಮಾನ ಮತ ಯಂತ್ರಗಳು (ಇವಿಎಂಎಸ್)</u>**

ಈ ಉಪಚುನಾವಣೆಯ ಎಲ್ಲಾ ಮತಗಟ್ಟೆಗಳಲ್ಲಿ ವಿದ್ಯುನ್ಮಾನ ಮತ ಯಂತ್ರಗಳನ್ನು ಬಳಸಲು ಚುನಾವಣಾ ಆಯೋಗವು ನಿರ್ಧರಿಸುತ್ತದೆ. ಈ ಉಪಚುನಾವಣೆಗೆ ಅಗತ್ಯವಿರುವಷ್ಟು ವಿದ್ಯುನ್ಮಾನ ಮತ ಯಂತ್ರಗಳು ಲಭ್ಯವಿದ್ದು, ಈ ವಿದ್ಯುನ್ಮಾನ ಮತ ಯಂತ್ರಗಳ ಸಹಾಯದಿಂದ ಉಪಚುನಾವಣೆಯನ್ನು ಸುಗಮವಾಗಿ ನಡೆಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

**<u>ಮತದಾರರ ಗುರುತಿಸುವಿಕೆ</u>**

ಈ ಉಪಚುನಾವಣೆಯ ಮತದಾನದ ಸಮಯದಲ್ಲಿ ಮತದಾರರ ಗುರುತಿಸುವಿಕೆಯನ್ನು ಚುನಾವಣಾ ಆಯೋಗವು ಕಡ್ಡಾಯಗೊಳಿಸಿರುತ್ತದೆ. ಮತದಾರರನ್ನು ಗುರುತಿಸಲು ಮತದಾರರ ಗುರುತಿನ ಕಾರ್ಡ್ (ಎಪಿಕ್) ಪ್ರಮುಖ ದಾಖಲೆಯಾಗಿರುತ್ತದೆ. ಆದರೆ ಮತದಾರರ ಪಟ್ಟಿಯಲ್ಲಿ ಮತದಾರನ/ಳ ಹೆಸರು ದಾಖಲಾಗಿದ್ದು ಅಂತಹ ಯಾವುದೇ ಅರ್ಹ ಮತದಾರ/ಳು ಮತ ಚಲಾಯಿಸುವುದರಿಂದ ವಂಚಿತರಾಗದಂತೆ ಮಾಡಲು ಅವರ ಗುರುತಿಸುವಿಕೆಯನ್ನು ದೃಢೀಕರಿಸಲು ಇತರೆ ಹೆಚ್ಚುವರಿ ದಾಖಲೆಗಳನ್ನು ಹಾಜರುಪಡಿಸಲು ಅಗತ್ಯ ಸೂಚನೆಗಳನ್ನು ಚುನಾವಣಾ ಆಯೋಗವು ಹೊರಡಿಸುತ್ತದೆ.

**<u>ಮಾದರಿ ನೀತಿ ಸಂಹಿತೆ</u>**

ಸಚಿವರ ಪ್ರವಾಸ ಹಾಗೂ ಚುನಾವಣೆ ಕೆಲಸಕ್ಕೆ ಸಂಬಂಧಿಸಿದ ಅಧಿಕಾರಿಗಳ ವರ್ಗಾವಣೆ ಕುರಿತಂತೆ ಮಾದರಿ ನೀತಿ ಸಂಹಿತೆಯ ನಿಭಂದನೆಗಳು ಚುನಾವಣೆ ನಡೆಯುವ ಜಿಲ್ಲೆಯಾದ್ಯಾಂತ ಅನ್ವಯವಾಗುತ್ತವೆ. ಆದರೆ ಹೊಸ ಕಾಮಗಾರಿಗಳು/ಯೋಜನೆಗಳ ಜಾರಿಗೆ ಸಂಬಂಧಿಸಿದಂತೆ ಮಾದರಿ ನೀತಿ ಸಂಹಿತೆಯ ನಿಭಂದನೆಗಳು ಆಯಾ ವಿಧಾನ ಸಭಾ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರುತ್ತವೆ.

**(ಅನಿಲ್ ಕುಮಾರ್ ಝಾ)**
ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ ಹಾಗೂ
ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಿಆಸುಇ( ಚುನಾವಣೆಗಳು).